# ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ

# ಬಳ್ಳಾರಿ

## ಸತ್ರ ಮೊಕದ್ದಮೆ ಸಂಖ್ಯೆಃ115/2025

**ಪಿ.ಡಬ್ಲ್ಯೂಃ5 (ಸಿಡಬ್ಲ್ಯೂಃ9)**

| | | |
|---|---|---|
| **ಸಾಕ್ಷಿದಾರರ ಹೆಸರು** | : | **ಶ್ರೀ ಸುಬ್ಬರಾವ್** |
| **ತಂದೆಯ ಹೆಸರು** | : | **ವೀರಾರಾಜು** |
| **ವಯಸ್ಸು** | : | **57 ವರ್ಷ** |
| **ಕೆಲಸ** | : | **ವ್ಯವಸಾಯ** |
| **ವಾಸ ಸ್ಥಳ** | : | **ಕೋಳೂರು ಕ್ರಾಸ್** |

**ಸಾಕ್ಷಿಯನ್ನು ದಿನಾಂಕ 25.07.2026 ರಂದು ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು.**

**ಮುಖ್ಯ ವಿಚಾರಣೆಃ ಸರ್ಕಾರಿ ಅಭಿಯೋಜಕರಿಂದಃ**

ನನಗೆ ಆರೋಪಿ ಮತ್ತು ಚಾಸಾ.10 ಗೊತ್ತಿಲ್ಲ. ಅವರಿಬ್ಬರ ನಡುವಿನ ಯಾವುದೇ ಗಲಾಟೆ ಸಂಗತಿ ನನಗೆ ಗೊತ್ತಿಲ್ಲ. ನಾನು ಆರೋಪಿಯ ವಿರುದ್ಧ ಯಾವುದೇ ಹೇಳಿಕೆ ನೀಡಿಲ್ಲ. ಆದರೆ ದಾಖಲೆಯೊಂದಕ್ಕೆ ಪೊಲೀಸರು ನನ್ನ ರುಜು ಪಡೆದಿದ್ದರು. ನಾನು ಪ್ರಶ್ನಿಸಿದ ಯಾವುದೇ ಜಗಳವನ್ನು ಬಿಡಿಸಿಲ್ಲ.

***(ಈ ಹಂತದಲ್ಲಿ ಮಾನ್ಯ ಅಭಿಯೋಜಕರು ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸಬೇಕೆಂದು ಕೋರಿದ್ದು, ಕೋರಿಕೆ ಸಮರ್ಪಕವಾಗಿದ್ದು ಪುರಸ್ಕರಿಸಲಾಗಿದೆ ಮತ್ತು ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸಲಾಗಿದೆ. )***

**S.C.No.115/2025**
**P.W. 5 (C.W.9 )**
**Date : 25.07.2026**

**ಪಾಟಿ ಸವಾಲುಃ ಮಾನ್ಯ ಸರ್ಕಾರಿ ಅಭಿಯೋಜಕರಿಂದಃ**

**2.** ದಿಃ25.8.2025 ರಂದು ರಾತ್ರಿ 10.00 ರ ಸಮಯದಲ್ಲಿ ಆರೋಪಿ ತಾಯಿ ಮತ್ತು ಆಕೆಯ ಮಗ ಚಾಸಾ.10 ರವರು ಅವರುಗಳು ಬೇಡುತ್ತಿದ್ದ ಭಿಕ್ಷಾ ಹಣದ ಹಂಚಿಕೆ ವಿಚಾರದಲ್ಲಿ ಜಗಳ ಮಾಡಿಕೊಂಡು ಜಗಳ ಮುಂದುವರೆಸಿ ಆರೋಪಿ ತಾಯಿ ಈಗ ನನಗೆ ತೋರಿಸಿದ ಕರೆ ಬಂಡೆಯಿಂದ ಚಾಸಾ.10 ರವರ ತಲೆಯ ಭಾಗಕ್ಕೆ ಹೊಡೆದು ರಕ್ತಗಾಯ ಮಾಡಿದ್ದು , ನಾನು ಮತ್ತು ಇತರರು ಚಾಸ-.10 ಗಾಯಾಳುವನ್ನು ಆಂಬುಲೆನ್ಸ ಮುಖೇನ ಚಿಕಿತ್ಸೆಯ ಸಲುವಾಗಿ ಆಸ್ಪತ್ರೆಗೆ ಕಳುಹಿಸಿದೆವು ಎಂದರೆ ಸರಿಯಲ್ಲ. ಸೂಚಿಸಿದ ಸಂಗತಿಗಳನ್ನು ನಮೂದಿಸಿ ನಾನು ಪೊಲೀಸರಿಗೆ ಹೇಳಿಕೆಯನ್ನು ಈಗ ನನಗೆ ಓದಿ ಹೇಳಿದಂತೆ ಅಂದರೆ " ನಾನು ಮೇಲ್ಕಂಡ ವಿಳಾಸದಲ್ಲಿ ..... ರಕ್ತಗಾಯ ಮಾಡಿರುತ್ತಾರೆ " ಎಂದು ನಮೂದಿಸಿ ಹೇಳಿಕೆ ನೀಡಿಲ್ಲ. ನನಗೆ ಓದಿ ಹೇಳಿದ ಹೇಳಿಕೆಯನ್ನು ಈಗ **ನಿಪಿ.8** ಎಂದು ಗುರುತು ಮಾಡಲಾಯಿತು. ನಿಪಿ.8 ರ ಸಂಗತಿ ಬಗ್ಗೆ ನನಗೆ ಸಂಪೂರ್ಣ ಮಾಹಿತಿ ಇದ್ದರೂ ಆರೋಪಿಗೆ ಸಹಾಯ ಮಾಡುವ ಸಲುವಾಗಿ ನಾನು ಅಸತ್ಯ ನುಡಿದೆ ಎಂದರೆ ಸರಿಯಲ್ಲ.

## ಪಾಟೀಸವಾಲುಃ ಆರೋಪಿ ಪರ ವಕೀಲರಿಂದ:

## ಇಲ್ಲ

**(ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಗಿದೆ)**

**ಓ.ಹೇ.ಕೆ. ಸರಿ ಇದೆ.**

\

**ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,**
**ಬಳ್ಳಾರಿ.**